ಎಂದು ಹೊಗಳಿ ಬರೆಯಲಾಗಿತ್ತು. ಆಕೆಯ ಸಮಾಧಿಯ ಬಳಿ ಬರುವ ಜನ ಕಾಲಕಾಲಕ್ಕೆ ತಮಗೆ ಅನಿಸಿದ್ದನ್ನು ಬರೆದು ಬ್ಯಾನರುಗಳನ್ನು ಅಂಟಿಸಿ ಹೋಗುತ್ತಾರಂತೆ. ಸಮಾಧಿಯನ್ನು ನೋಡಲು ಬಂದವರಲ್ಲಿ ಯಾರೋ ಒಬ್ಬರು 'ಪ್ರೇಮದ ಹಿಡಿ ಸಂತೋಷಕ್ಕಾಗಿ ತಂದೆಯ ಸಾಮ್ರಾಜ್ಯವನ್ನೇ ಹುಡಿ ಹಾರಿಸಿದ ಕವಿ' ಎಂದು ಬರೆದು ಹೋಗಿದ್ದರು ಎಂದು ಇತಿಹಾಸಕಾರರೊಬ್ಬರು ಉಲ್ಲೇಖಿಸಿದ್ದಾರೆ. ಇನ್ನೊಬ್ಬರು ಅಲ್ಲಿ 'ಸ್ತ್ರೀವಾದಿ ಎಂದರೆ ಹೀಗಿರಬೇಕು' ಎಂದು ಬರೆದು ಹೋಗಿದ್ದರು.

ರಾಬಿಯಾಳ ಬದುಕು ಅತ್ಯಂತ ದಾರುಣವಾಗಿ ಅಂತ್ಯವಾಗಿದ್ದರೂ ಆಕೆಯ ಮರಣಾನಂತರದ ಬದುಕು ಇವತ್ತಿಗೂ ಆಫ್ಘನ್ ಮಹಿಳೆಯರಿಗೆ ಬಹಳ ಸ್ಫೂರ್ತಿದಾಯಕವಾಗಿರುವುದು ಕಾಲದ ವ್ಯಂಗ್ಯ ಹಾಗೂ ರಾಜಕೀಯ ಒತ್ತಾಸೆಗಳಿಗೆ ಉದಾಹರಣೆಯಾಗಿದೆ. 20ನೇ ಶತಮಾನದಲ್ಲಿ ಆಫ್ಘಾನಿಸ್ತಾನ ತನ್ನ ಇಸ್ಲಾಮಿಕ್ ಇತಿಹಾಸವನ್ನು ಮರುಸೃಷ್ಟಿ ಮಾಡಿಕೊಳ್ಳುವ ಪ್ರಯತ್ನದಲ್ಲಿ ಹಾಗೂ ತಾಲಿಬಾನಿಗಳ ಅಮಾನುಷ ಪುರುಷಾಧಿಕಾರದ ವಿರುದ್ಧದ ಹೋರಾಟದಲ್ಲಿ ಅಲ್ಲಿನ ಮಹಿಳೆಯರಿಗೆ ರಾಬಿಯಾ ಧೀಮಂತ ಸಾಂಸ್ಕೃತಿಕ ನಾಯಕಿಯಾಗಿ ದೊರಕಿರುವುದು ಆಕೆಯ ಪ್ರೇಮಕ್ಕೆ ದೊರಕಿರುವ ಬಹು ದೊಡ್ಡ ಸಾರ್ವಜನಿಕ ಮನ್ನಣೆಯಾಗಿದೆ. ನೈಲ್ ಗ್ರೀನ್ ಅವರಂತಹ ಇತಿಹಾಸಕಾರರು ಇದನ್ನು ವಿಶೇಷವಾಗಿ ಗುರುತಿಸಿದ್ದಾರೆ. ದೇಶದಾದ್ಯಂತ ಸ್ಕೂಲು, ಕಾಲೇಜುಗಳು, ಆಸ್ಪತ್ರೆ, ವಿಶ್ವವಿದ್ಯಾಲಯಗಳು, ಮಾರ್ಕೆಟ್‌ಗಳು, ರೇಡಿಯೋ ಕೇಂದ್ರಗಳು ರಾಬಿಯಾಳ ಹೆಸರನ್ನು ಜಪಿಸುತ್ತಿರುವುದು ಏಕಕಾಲಕ್ಕೆ ಆಕೆಯನ್ನು ಕವಿಯಾಗಿ, ಸೂಫಿ ಸಂತಳಾಗಿ, ಅದಮ್ಯ ಸ್ತ್ರೀವಾದಿಯಾಗಿ ಆದರಿಸುತ್ತಿರುವುದು ಶತಮಾನಗಳ ಪಾತಕವನ್ನು ಪರಿಪರಿಯಾಗಿ ನಿವಾರಿಸಿಕೊಳ್ಳುತ್ತಿರುವುದಕ್ಕೆ ಉದಾಹರಣೆಯಾಗಿದೆ.

ರಾಬಿಯಾ ತೀರಿಹೋದ ಮೇಲೂ ಅವಳು ಇಂದು ಬರೆಯುವ ಕವಿಗಳಿಗೆ, ಹೋರಾಟಗಾರ್ತಿಯರಿಗೆ ಬಹಳ ದೊಡ್ಡ ಸ್ಫೂರ್ತಿಯ ಕೇಂದ್ರವಾಗಿರುವುದು ಅವಳ ಕಾವ್ಯ ಹಾಗೂ ಬದುಕು ಎಲ್ಲ ಅಧಿಕಾರ, ದಬ್ಬಾಳಿಕೆಗಳನ್ನು ಮೀರಿ ನಿಲ್ಲಬಹುದಾದ ಪ್ರೇಮದ ತೀವ್ರತೆಗೆ ಅತ್ಯುತ್ತಮ ಉದಾಹರಣೆಯಂತಿದೆ. 2016ರಲ್ಲಿ ಆರಿಫಾ ಅಮಿರಿ ಎಂಬ ಹೊಸ ತಲೆಮಾರಿನ ಕವಯಿತ್ರಿ ರಾಬಿಯಾಳನ್ನು ದೇಶದ ಇತರ ಹೋರಾಟಗಾರ್ತಿಯರ ಜೊತೆ ನೆನೆದಿರುವುದು ರಾಬಿಯಾಳ ಪ್ರೇಮಕ್ಕೆವ್ಯಕ್ತಿತ್ವಕ್ಕೆ ಸಲ್ಲಿಸಿದ ದಿಟ್ಟ ಶ್ರದ್ಧಾಂಜಲಿಯಂತಿದೆ. ಆ ಪದ್ಯ ಕೆಳಗಿನಂತಿದೆ:

**ನಾನು ಮುರಿದುಹೋಗುವುದಿಲ್ಲ**

**-ಆರಿಫಾ ಅಮಿರಿ**

**ನಾನು ರಾಬಿಯಾಳ ರಕ್ತದಿಂದ ಹುಟ್ಟಿ ಬಂದಿದ್ದೇನೆ**
**ನನ್ನ ಬೇರುಚಿಗುರುಗಳನ್ನು ನೂರಾರು ಸಲ**
**ಕತ್ತರಿಸಿದರೂ**
**ನಾನು ಮತ್ತೊಮ್ಮೆ ಚಿಗಿತು ಅರಳುತ್ತೇನೆ**
**ನಾನು ಹುಟ್ಟಿರುವುದು ಪ್ರೀತಿಯಿಂದ**
**ನಾನು ಪ್ರೀತಿಯ ಬಗ್ಗೆ ಬರೆದಾಗ**
**ಅವರು ನನ್ನನ್ನು ಮೂಕಳಾಗಿಸಿ ತಲೆಯೊಡೆದು ಕೈ**
**ಕತ್ತರಿಸಿ**
**ನಾಲ್ಕು ಗೋಡೆಮಾಡುಗಳ ನಡುವೆ**
**ಬಂದಿಯಾಗಿಸುವರು**
**ಕೊನೆಯ ಹನಿರಕ್ತದಲ್ಲಿರುವ ಪಸೆ ಆರುವವರೆಗೂ**
**ಬರೆಯುವೆ ನನ್ನ ನೋವಿನ ಸಾಲುಗಳ**

**ಹಿಂಸೆ ದೌರ್ಜನ್ಯಗಳ ನಡುವೆಯೇ**
**ನಾನೂ ರಾಬಿಯಾಳಂತೆ ಬರೆಯುವೆ**
**ರಕ್ತದ ಹನಿಗಳೆಲ್ಲ ಮಡುಗಟ್ಟುವಂತೆ**
**ಮೂಕ ಗೋಡೆ ಕಲ್ಲುಗಳ ಮೇಲೆ**
**ಅವುಗಳ ಬಿರುಕಿಂದ ನೋವು ಚಿಮ್ಮುವಂತೆ**
**ನಾನು ಎದ್ದು ಬಂದಿರುವೆ ರಾಬಿಯಾಳ ರಕ್ತದಿಂದ**
**ಸೆಣಸುವ ಸೋಲದ ಆಫ್ಘನ್ ಹೆಣ್ಣುಮಗಳಂತೆ**
**ನೋಡಲಿ ಜಗತ್ತು ನಾನು ಏನನ್ನು ಕೊಟ್ಟಿದ್ದೇನೆಂದು**

**ನಾನು ಅಡಗಿರುವೆ ಬುರ್ಖಾದ ಹಿಂದೆ**
**ಎತ್ತರದ ಗೋಡೆಗಳ ಹಿಂದೆ**
**ಮಾನ ಮರ್ಯಾದೆಗಳ ಮುಚ್ಚುಮರೆಗಳ ಹಿಂದೆ**
**ಯಾವ ಸೆರೆಮನೆಯಲ್ಲೂ ಬಚ್ಚಿಡಲಾಗದ**
**ಹೊಸಗಾಳಿಯ ಹಿತವ ಹುಡುಕುವ ಮುಖದ ಹಿಂದೆ**
**ಸುಡುವ ರಕ್ತದ ಹಿಂದೆ**
**ನಾಶಮಾಡಿದರೂ ಮೇಲೆದ್ದು ಬರುವ**
**ಹೂತು ಹಾಕಿದರೂ ಮೇಲೆದ್ದು ಬರುವ ಆತ್ಮದ ಹಿಂದೆ**